## ದಿನಾಂಕ:27-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 12 (139)/2010-11**

ಟಿಪ್ಪಣಿಯಲ್ಲಿ ವಿವರಿಸುವಂತೆ, ದಿನಾಂಕ:29-05-2010 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:41/2010-11 ರಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ.

| ಎ) ಕಾಮಗಾರಿ ಅಂದಾಜು ಪಟ್ಟಿ ಅನುಮೋದನೆ | | |
|---|---|---|
| **ಮಂಜೂರಾತಿ ಪ್ರಾಧಿಕಾರ** | **ಹಾಲಿ ಇರುವ ಮೊತ್ತ (ರೂ. ಲಕ್ಷಗಳಲ್ಲಿ)** | **ಮಾರ್ಪಾಡು ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)** |
| ಆಯುಕ್ತರು | 300.00 | 50.00 |
| ಸ್ಥಾಯಿ ಸಮಿತಿ | 300.00 ರಿಂದ 400.00 | 200.00 |
| ಪಾಲಿಕೆ ಸಭೆ | 400.00 ರಿಂದ 500.00 | 500.00 |
| ಸರ್ಕಾರ | 500.00 ಲಕ್ಷಗಳಿಗೆ ಮೇಲ್ಪಟ್ಟು | |
| **ಎ) ಕಾಮಗಾರಿಯ ಟೆಂಡರ್ ಅನುಮೋದನೆ** | | |
| **ಮಂಜೂರಾತಿ ಪ್ರಾಧಿಕಾರ** | **ಹಾಲಿ ಇರುವ ಮೊತ್ತ (ರೂ. ಲಕ್ಷಗಳಲ್ಲಿ)** | **ಮಾರ್ಪಾಡು ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)** |
| ಆಯುಕ್ತರು | 300.00 | 60.00 ಲಕ್ಷಗಳವರೆಗೆ |
| ಸ್ಥಾಯಿ ಸಮಿತಿ | 300.00 ರಿಂದ 400.00 | 250.00 ಲಕ್ಷಗಳವರೆಗೆ |
| ಪಾಲಿಕೆ ಸಭೆ | 400.00 ರಿಂದ 500.00 | 500.00 ಲಕ್ಷಗಳವರೆಗೆ |
| ಸರ್ಕಾರ | 500.00 ಲಕ್ಷಗಳಿಗೆ ಮೇಲ್ಪಟ್ಟು | 500.00 ಲಕ್ಷಗಳಿಗೆ ಮೇಲ್ಪಟ್ಟು |

ದಿನಾಂಕ:28-06-2010 ರಂದು ಪಾಲಿಕೆಯ ನಿರ್ಣಯವನ್ನು ಸರ್ಕಾರದ ಅವಗಾಹನೆಗೆ ತಂದು ಪತ್ರ ಬರೆಯಲಾಗಿತ್ತು. ಈ ಪತ್ರಕ್ಕೆ ಸರ್ಕಾರವು ದಿನಾಂಕ:17-09-2010 ರಂದು ಪತ್ರ ಬರೆದು ಪಾಲಿಕೆಯ ಸಭೆಯು ದಿನಾಂಕ:29-05-2010 (29-06-2010 ಸರ್ಕಾರದ ಪತ್ರದಂತೆ) ರಂದು ವಿಷಯದ ಸಂಖ್ಯೆ:41/2010-11 (53/2010-11 ಸರ್ಕಾರದ ಪತ್ರದಂತೆ) ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಏಕೆ ರದ್ದುಪಡಿಸಬಾರದು? ಎಂಬುದಕ್ಕೆ ಕರ್ನಾಟಕ ಪೌರ ನಿಗಮಗಳ ಕಾಯ್ದೆ, 1976 ರ ಕಲಂ 98(2) ಪ್ರಕಾರ ಈ ಕಾರಣ ಕೇಳುವ ನೋಟೀಸ್ ಅನ್ನು ಜಾರಿ ಮಾಡಲಾಗಿದೆ. ಈ ನೋಟೀಸ್ ಅನ್ನು ಪಾಲಿಕೆಯ ಸಭೆಯ ಗಮನಕ್ಕೆ ತಂದು ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಪಾಲಿಕೆಯ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ, ಅದನ್ನು 15 ದಿನಗಳೊಳಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಸೂಚಿಸಿ ಪತ್ರ ಬರೆದಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಹೊರಡಿಸಿರುವ ಕಾರಣ ಕೇಳಿ ನೋಟಿಸ್‌ನ ವಿಷಯವನ್ನು ಪಾಲಿಕೆಯ ಸಭೆಯ ಅವಗಾಹನೆಗೆ ತರುತ್ತಾ, ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-10-2010 ರ ಟಿಪ್ಪಣಿ.

..............................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮರು ಅನುಮೋದನೆಗಾಗಿ ಈಗಾಗಲೇ ನಿರ್ಣಯ ಕೈಗೊಂಡಿದ್ದು, ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಆಯುಕ್ತರವರಿಗೆ ಸೂಚಿಸಿದೆ".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಮರು ಅನುಮೋದನೆಗಾಗಿ ಈಗಾಗಲೇ ನಿರ್ಣಯ ಕೈಗೊಂಡಿದ್ದು, ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಆಯುಕ್ತರವರಿಗೆ ಸೂಚಿಸಿದೆ".

Dayanand. N

**(ಎನ್.ದಯಾನಂದ್)**
ಉಪ ಮಹಾಪೌರರು